ದಲಿತರು ಹಾಗೂ ಸವರ್ಣೀಯರ ಮಧ್ಯ ಘರ್ಷಣೆ ಉಂಟಾಗಿರುವ ಬಗ್ಗೆ.

1341 – ಶ್ರೀ ಸುಭಾಸ್ ಜೋಷಿ (ನಿಪ್ಪಾಣಿ). ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನ ಬೆಡಿಕೆ ಹಾಳ್ ಗ್ರಾಮದಲ್ಲಿ ದಲಿತರು ಹಾಗೂ ಸವರ್ಣೀಯರ ಮಧ್ಯ ಘರ್ಷಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಎಷ್ಟು ಜನರು ಮೃತಪಟ್ಟಿದ್ದಾರೆ;

ಇ) ಎಷ್ಟು ಜನರನ್ನು ಬಂಧಿಸಲಾಗಿದೆ;

ಈ) ದಲಿತರಿಗೆ ಏನಾದರೂ ರಕ್ಷಣೆಯನ್ನು ನೀಡಲಾಗಿದೆಯೇ?

ಶ್ರೀ ಧರ್ಮಸಿಂಗ್, (ಗೃಹ ಸಚಿವರು):

ಅ) ಹೌದು.

ಆ) ಯಾರೂ ಮೃತರಾಗಿರುವುದಿಲ್ಲ. ಆದರೆ ಪೋಲೀಸ್ ಪೇದೆಯ ಬಂದೂಕಿನಿಂದ ಆಕಸ್ಮಿಕವಾಗಿ ಹೊರಬಂದ ಗುಂಡಿನಿಂದಾಗಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ.

ಇ) 36

ಈ) ಹೌದು.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ವರದಿಯನ್ನೊಪ್ಪಿಸುವುದು.

ವರದಿಯನ್ನೊಪ್ಪಿಸುವುದು.

ಶ್ರೀಮತಿ ಸಿ.ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎಂಟನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್: ಈ ವರದಿಯನ್ನು ಸಭೆಯು ಒಪ್ಪುವುದೆಂದು ಸೂಚಿಸುತ್ತೇನೆ. ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ರಾಜ್ಯದಲ್ಲಿ ದರೋಡೆಗಳಾಗುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೇ, ನಿನ್ನೆದಿನ ಈ ಸದನದಲ್ಲಿ ಪ್ರಶ್ನೋತ್ತರ ಅವಧಿಯ ನಂತರ, ರಾಜ್ಯದಲ್ಲಿ ಆಗುತ್ತಿರತಕ್ಕ ದರೋಡೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಿರಿ. ಮಾನ್ಯ ಗೃಹಸಚಿವರು ಒಂದು ಹೇಳಿಕೆ ಕೊಡುತ್ತಾರೆಂದು, ಅವರ ಪರವಾಗಿ ಮಾನ್ಯ ಮೊಯ್ಲಿಯವರು ಹೇಳಿದರು. ಈ ಹೇಳಿಕೆ ಆಗುತ್ತಿರುವಾಗಲೇ ಮತ್ತೊಂದು ದರೋಡೆ ಹಾಸನ ಜಿಲ್ಲೆಯ ಅರಸೀಕೆರೆ ಹತ್ತಿರ ಬಸ್ ನಿಲ್ಲಿಸಿ, ಅಲ್ಲಿರತಕ್ಕ ಪ್ಯಾಸೆಂಜರುಗಳನ್ನು ದರೋಡೆ ಮಾಡಿ, ಸಾವಿರಾರು ರೂಪಾಯಿ ಅಪಹರಿಸಿರುವುದು ಮತ್ತು ಹೆಣ್ಣುಮಕ್ಕಳ ಚಿನ್ನವನ್ನು ದರೋಡೆ ಮಾಡಿರುವುದೂ ಇಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ತಮ್ಮ ಗಮನಕ್ಕೂ ಬಂದಿದೆ.

ಅಧ್ಯಕ್ಷರು: ಇದನ್ನು ಸೋಮವಾರ ಗಮನಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೃಹ ಸಚಿವರು ಇಲ್ಲಿಯೇ ಇದ್ದಾರೆ, ಅವರು ಒಂದು ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡಿ.